## ಜಾಕೆಟ್ ಬಳಸುವವರಿಗೆ ಟಿಪ್ಸ್

- ಲೆದರ್‌ನ ಟ್ರೈಬಲ್ ಜಾಕೆಟ್ ಅನ್ನು ಸಾಂಪ್ರದಾಯಿಕ ಉಡುಗೆ ಜೊತೆ ಮ್ಯಾಚ್ ಮಾಡಿ ಧರಿಸಲು ಸಾಧ್ಯವಿಲ್ಲ. ಹಾಗಾಗಿ ಅವನ್ನು ಕ್ಯಾಶುಯಲ್ ಪ್ಯಾಂಟ್ ಶರ್ಟ್ ಜೊತೆ ತೊಡಬಹುದು. ಇಂಥ ಟ್ರೈಬಲ್ ಜಾಕೆಟ್‌ಗಳನ್ನು ಹೆಚ್ಚಾಗಿ ಕ್ರೀಡಾಪಟುಗಳು ಇಷ್ಟಪಡುತ್ತಾರೆ.
- ಜೀನ್ಸ್ ಟ್ರೈಬಲ್ ಜಾಕೆಟ್‌ಗಳನ್ನು ಖಾದಿ ಉಡುಗೆಯ ಜೊತೆ, ಸ್ಕರ್ಟ್ಸ್ ಜೊತೆ ತೊಡಬಹುದು.
- ಡೆನಿಮ್ ಟ್ರೈಬಲ್ ಜಾಕೆಟ್‌ಗಳನ್ನು ಪ್ಲೇನ್ ಬಟ್ಟೆಗಳ ಜೊತೆ ತೊಟ್ಟರೆ ಎದ್ದು ಕಾಣುತ್ತದೆ.
- ಒಂದು ಜಾಕೆಟ್ ಮೇಲೆ ಹೆಚ್ಚು ಪದರಗಳಿದ್ದರೆ ಅದಕ್ಕೆ ಲೇಯರ್ಡ್ ಜಾಕೆಟ್ ಎನ್ನುತ್ತಾರೆ. ಈ ತರಹದ ಲೇಯರ್ಡ್ ಟ್ರೈಬಲ್ ಜಾಕೆಟ್ ಅನ್ನು ಬಹುತೇಕ ಸಿನಿಮಾ ನಟ ನಟಿಯರು ಧರಿಸಿ ಟ್ರೆಂಡ್ ಅನ್ನೇ ಸೃಷ್ಟಿಸಿದ್ದಾರೆ. ಇಂತಹ ಜಾಕೆಟ್‌ಗಳನ್ನು ಇದೀಗ ಯುವಕರು ಮದುವೆ ಇನ್ನಿತರ ಶುಭ ಸಮಾರಂಭಗಳಲ್ಲಿ ಧರಿಸಿ ಮಿಂಚುತ್ತಿದ್ದಾರೆ.
- ಯುವತಿಯರು ಸಾಂಪ್ರದಾಯಿಕ ಸಮಾರಂಭಗಳಲ್ಲಿ ಧರಿಸಲು ಸಲ್ವಾರ್ ಕಮೀಜ್ ಅಥವಾ ಅನಾರ್ಕಲಿ ಡ್ರೆಸ್‌ಗಳ ಮೇಲೆ ಬ್ಲಾಕ್ ಪ್ರಿಂಟೆಡ್ ಟ್ರೈಬಲ್ ಜಾಕೆಟ್‌ಗಳನ್ನು ಧರಿಸಬಹುದು. ಈ ತರಹದ ಟ್ರೈಬಲ್ ಜಾಕೆಟ್‌ನಿಂದ ಯಾವುದೇ ಸರಳ ಉಡುಪನ್ನೂ ಡಿಫರೆಂಟ್ ಆಗಿ ಕಾಣುವಂತೆ ಪರಿವರ್ತಿಸಬಹುದು.



ಪ್ರಮಾಣದಲ್ಲಿ ಚಿತ್ರ ವಿಚಿತ್ರವಾಗಿ ಹರಿದಂತೆ ಕಾಣುವ ಜಾಕೆಟ್‌ಗಳು ಯುವಕ–ಯುವತಿಯರ ಹಾಟ್ ಫೇವರೆಟ್ ಆಗಿದೆ.

ಈ ಜಾಕೆಟ್‌ಗಳನ್ನು ಸಲ್ವಾರ್ ಕಮೀಜ್, ಜಂಪ್ ಸೂಟ್, ಜೀನ್ಸ್ ಪ್ಯಾಂಟ್, ಶರ್ಟ್... ಹೀಗೆ ಯಾವುದೇ ಉಡುಪುಗಳ ಜೊತೆ ಮ್ಯಾಚ್ ಮಾಡಿ ಧರಿಸಬಹುದಾಗಿದೆ. ಜೀನ್ಸ್, ಡೆನಿಮ್ ಜಾಕೆಟ್‌ಗಳು ಯುವಜನರನ್ನು ಸೆಳೆಯುತ್ತಿದೆ. ಇದೀಗ ವಸ್ತ್ರವಿನ್ಯಾಸಕಾರರು ಈ ಜಾಕೆಟ್‌ಗಳನ್ನು ಇನ್ನಷ್ಟು ಅಪ್‌ಡೇಟ್ ಮಾಡುವ ಉದ್ದೇಶದಿಂದ ಈ ಜಾಕೆಟ್ ವಿನ್ಯಾಸದಲ್ಲಿ ಟ್ರೈಬಲ್ ವಿನ್ಯಾಸವಿರುವ ಜಾಕೆಟ್‌ಗಳನ್ನು ಮಾರುಕಟ್ಟೆಗೆ ಬಿಟ್ಟಿದ್ದಾರೆ. ಹೊಸ ಲುಕ್, ಹೊಸ ವಿನ್ಯಾಸ, ಚಿತ್ರ ವಿಚಿತ್ರ ಆಕೃತಿ, ಚಿಹ್ನೆ ಚಿತ್ತಾರಗಳುಳ್ಳ ಜಾಕೆಟ್‌ಗಳು ಇದೀಗ ಜನಪ್ರಿಯತೆಯ ಹಾದಿಯಲ್ಲಿವೆ. ಈ ಜಾಕೆಟ್‌ಗಳು ಹಾಫ್ ಸ್ಲೀವ್, ಫುಲ್ ಸ್ಲೀವ್, ಮುಕ್ಕಾಲು ಸ್ಲೀವ್‌ಗಳಲ್ಲಿಯೂ ದೊರೆಯುತ್ತಿವೆ. ಇದೀಗ ವಿದ್ ಕಾಲರ್ ಜಾಕೆಟ್‌ಗಳ ಜೊತೆ ಕಾಲರ್ ಇಲ್ಲದ ಜಾಕೆಟ್‌ಗಳೂ ಲಭ್ಯ.

ಆಕರ್ಷಕ ವಿನ್ಯಾಸ, ಚಿತ್ರ ವಿಚಿತ್ರ ಡಿಸೈನ್‌ಗಳನ್ನು ಹೊಂದಿದ ಈ ಜಾಕೆಟ್‌ಗಳು ಗಾಢವರ್ಣವನ್ನು ಹೊಂದಿದ್ದು, ಇವುಗಳು ಯುವಜನರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿವೆ. ಈ ತರಹದ ಜಾಕೆಟ್‌ಗಳನ್ನು ಎಲ್ಲಾ ತರಹದ ಉಡುಪುಗಳಿಗೂ ಮ್ಯಾಚ್ ಮಾಡಿ ಧರಿಸಬಹುದು. ಅಲ್ಲದೆ ಇದೀಗ ಎಲ್ಲರ ನಡುವೆ ಫ್ಯಾಷನಬಲ್ ಆಗಿ ಕಾಣಬಯಸುವ ಮಹಿಳೆಯರು ಈ ಜಾಕೆಟ್‌ಗಳನ್ನು ಸೀರೆಯ ಮೇಲೂ ಧರಿಸಿ ಹೊಸ ಲುಕ್ ನೀಡುತ್ತಿದ್ದಾರೆ.

### ಟ್ರೈಬಲ್ ಜಾಕೆಟ್‌ಗಳನ್ನು ಗುರುತಿಸುವುದು ಹೇಗೆ?

ಜಾಕೆಟ್ ನೋಡಿದಾಗ ಕೇವಲ ಒಂದೇ ಬಣ್ಣ ಇದ್ದರೆ ಸಾಲದು, ಅದರ ಜೊತೆಗೆ ಫ್ಲೋರಲ್ ಪ್ರಿಂಟ್ ವಿನ್ಯಾಸ ಮತ್ತು ವಿಶಿಷ್ಟ ಚಿತ್ರಗಳು, ಗೆರೆಗಳು ಇದ್ದರೆ ಮಾತ್ರ ಇವುಗಳನ್ನು ಟ್ರೈಬಲ್ ಜಾಕೆಟ್ ಎಂದು ಗುರುತಿಸಬಹುದು.

ಪ್ಲೇನ್ ಉಡುಗೆ ಮೇಲೆ ಬಣ್ಣ ಬಣ್ಣದ ಟ್ರೈಬಲ್ ಜಾಕೆಟ್ ಅಂದವಾಗಿ ಕಾಣುತ್ತದೆ. ಇವುಗಳಲ್ಲಿ ಬಟನ್ ಇರುವ ಟ್ರೈಬಲ್ ಜಾಕೆಟ್‌ಗಳು, ದಾರ ಇರುವ ಟ್ರೈಬಲ್ ಜಾಕೆಟ್‌ಗಳು, ಜಿಪ್ ಇರುವ ಟ್ರೈಬಲ್ ಜಾಕೆಟ್‌ಗಳು ಹೀಗೆ ವಿಭಿನ್ನ ಪ್ರಕಾರಗಳಿವೆ.

ಪಾರ್ಟಿಗಳಲ್ಲಿ, ಸಣ್ಣ ಪುಟ್ಟ ಗೆಟ್ ಟುಗೆದರ್‌ನಂಥ ಸಮಾರಂಭಗಳಲ್ಲಿ ಟ್ರೈಬಲ್ ಜಾಕೆಟ್‌ಗಳು ಡಿಫರೆಂಟ್ ಲುಕ್ ಕೊಡಲು ಸಹಕಾರಿಯಾಗುತ್ತವೆ. ■